



ಕಲ್ಯಾಣಿ ಸೌದಿ

ಪ್ರಚಾರಕ್ಕೂ ವಿಸ್ತರಿಸಿಕೊಂಡಿರುವುದು ಇನ್ನೊಂದು ಆಸಕ್ತಿಕರ ಸಂಗತಿ. ‘ಸಂಜು ವೆಡ್ಸ್ ಗೀತಾ–2’ ಚಿತ್ರತಂಡದವರನ್ನು ಮಾತಾಡಿಸಿಯೇ ಕಾಲು ಗಂಟೆ ಅವಧಿಯ ಒಂದು ವಿಡಿಯೊವನ್ನು ಪ್ರಿಯಾ ಚಿತ್ರಿಸಿದ್ದರು.

ಮೂರ್ನಾಲ್ಕು ತಿಂಗಳ ಅವಧಿಯಲ್ಲೇ ಪ್ರಿಯಾ ಅವರ ಪಾಡ್‌ಕಾಸ್ಟ್ ಚಾನಲ್‌ನ ಚಂದಾದಾರರ ಸಂಖ್ಯೆ ಸುಮಾರು ಒಂದೂಕಾಲು ಲಕ್ಷ ಆಗಿದೆ. ಒಂದು ತಿಂಗಳ ಹಿಂದೆ ಒಂದು ಲಕ್ಷವನ್ನೂ ದಾಟಿರಲಿಲ್ಲ. ಹೀಗಾಗಿ ತಮ್ಮ ಮನರಂಜನಾ ವಿಷಯಗಳನ್ನು ಹುಡುಕಿಕೊಂಡು ಬರುತ್ತಿರುವವರು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದಾರೆ ಎನ್ನುವ ಆತ್ಮವಿಶ್ವಾಸವು ಉತ್ಸಾಹವನ್ನು ಇಮ್ಮಡಿಗೊಳಿಸಿದೆ.

ಮಲ್ಯ ಬಾಗಲಕೋಟೆ, ಅಮಿತ್‌ರಾಜ್ ಅವರ ಯೂಟ್ಯೂಬ್ ಮನರಂಜನೆಯನ್ನು ಇಷ್ಟಪಡುವ ಪ್ರಿಯಾ ಅವರಿಗೆ, ನಟ ದುನಿಯಾ ವಿಜಯ್ ಹಾಗೂ ಧ್ರುವ ಸರ್ಜಾ ತಾವಾಗಿಯೇ ಗುರುತಿಸಿ ಮಾತಾಡಿದ್ದ ಗಳಿಗೆ ಖುಷಿ ಕೊಟ್ಟಿದೆ. ತಮ್ಮ ವಿಡಿಯೊಗಳನ್ನು ನೋಡಿರುವುದಾಗಿ ಈ ಇಬ್ಬರೂ ನಟರು ಹೇಳಿ, ಮೆಚ್ಚಿಕೊಂಡಾಗ ಆಕಾಶ ಮೂರೇ ಗೇಣು.

### ಧಾರವಾಡ ಶೈಲಿ, ಭರವಸೆಯ ಥೈಲಿ

ಕಲ್ಯಾಣಿ ಸೌದಿ ಧಾರವಾಡದ ಮಂದಿಯಲ್ಲಿ ಒಬ್ಬಾಕಿ. ಏಳನೇ ಇಯತ್ತೆಯಲ್ಲಿ ಇದ್ದಾಗ ರಾಜ್ಯೋತ್ಸವ ಬಂತು. ಶಾಲೆಯಲ್ಲಿ ಎಲ್ಲ ಮಕ್ಕಳಂತೆ ತಾವೂ ಏನಾದರೂ ವೇಷ ಹಾಕಬೇಕಿತ್ತು. ಅಮ್ಮನ ಒತ್ತಾಸೆಯಂತೆ ಕಿತ್ತೂರು ಚೆನ್ನಮ್ಮನ ವೇಷ ಧರಿಸಿದರು. ಚೆನ್ನಮ್ಮನ ಡೈಲಾಗ್ ಅನ್ನೂ ಒಂದೇ ಏಟಿಗೆ ಹೇಳಿದರು. ಇವನ್ನೆಲ್ಲ ಸಂಭ್ರಮದಿಂದ ಚಿತ್ರೀಕರಿಸಿಕೊಂಡ ತಾಯಿ, ಅದನ್ನು ಯೂಟ್ಯೂಬ್‌ಗೆ ಅಪ್‌ಲೋಡ್ ಮಾಡಿದರು. ಆ ತಾಯಿ ಮಗಳ ಮುಂದಿನ ಹೆಜ್ಜೆಗಳನ್ನೇ ಅಪ್‌ಲೋಡ್ ಮಾಡಿದ ಹಾಗಿತ್ತು ಆ ನಡೆ. ಯಾಕೆಂದರೆ, ಕಲ್ಯಾಣಿ ಈಗ ಜನರು ಗುರುತಿಸುತ್ತಿರುವ ಯೂಟ್ಯೂಬರ್‌ಗಳಲ್ಲಿ ಒಬ್ಬರೆನಿಸಿದ್ದಾರೆ. ಅದಕ್ಕಿಂತ ಹೆಚ್ಚಾಗಿ ರೀಲ್ಸ್ ಮೂಲಕ ಅವರು ಇಡುತ್ತಿರುವ ಕಚಗುಳಿಯಿಂದ ನಕ್ಕವರು, ಖುಷಿಪಟ್ಟವರೂ ಇದ್ದಾರೆ.

ಕಲ್ಯಾಣಿ ಪ್ರತಿಭೆ ಯೂಟ್ಯೂಬ್ ವೇದಿಕೆಯಲ್ಲಿ ಅನಾವರಣಗೊಳ್ಳಲು ಮುಖ್ಯ ಕಾರಣ ಅವರ ತಾಯಿ ಸುಜಾತಾ ಸವದಿ. ಚಿಕ್ಕ ವಯಸ್ಸಿನಿಂದಲೂ ಮಗಳ ಪ್ರತಿಭೆಗೆ ಸಾಣೆ ಹಿಡಿಯುತ್ತಾ, ಅದನ್ನು ಒಂದಿಷ್ಟು ಜನರು ನೋಡಬೇಕು ಎಂದು ಬಯಸುತ್ತಾ ಬಂದವರು ಅವರು.

ಕಲ್ಯಾಣಿ ಚಿಕ್ಕಂದಿನಿಂದಲೂ ನಟನೆ, ನೃತ್ಯ, ಮೇಕಪ್‌ನಲ್ಲಿ ಆಸಕ್ತಿ ತಳೆದವರು. ಅವರು ಕಲಿತದ್ದು ಇಂಟೀರಿಯರ್ ಡಿಸೈನಿಂಗ್ ಡಿಪ್ಲೊಮಾ. ಐದು ವರ್ಷಗಳ ಹಿಂದೆ ಯೂಟ್ಯೂಬ್ ಹುಚ್ಚು ಹತ್ತಿಸಿಕೊಂಡರು, ಮೊದ ಮೊದಲು ಆಗೊಂದು ಈಗೊಂದು ಎಂಬಂತೆ ಖುಷಿಗಾಗಿ ವಿಡಿಯೊಗಳನ್ನು ಅಪ್‌ಲೋಡ್ ಮಾಡುತ್ತಾ ಇದ್ದರು. ಎರಡು ವರ್ಷಗಳಿಂದ ಆ ವೇದಿಕೆಯ ಸಾಧ್ಯತೆಯನ್ನು